ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 1, March-April 2026, Pp. 61-64
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ಮಹಾನ್ ಸಂತ ಶ್ರೀ ಸೇವಾಲಾಲರ ಉಪದೇಶಗಳು

**ಜಾಧವ ನಾತುರಾಮ ಧನಸಿಂಗ**
ಕನ್ನಡ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***
*ಶ್ರೀ ಸೇವಾಲಾಲ ಮಹಾರಾಜರು ಲಂಬಾಣಿ/ಬಂಜಾರ ಸಮುದಾಯದ ಮಹಾನ್ ಸಂತರು ಮತ್ತು ಸಮಾಜ ಸುಧಾರಕರಾಗಿದ್ದರು. ಅವರ ಉಪದೇಶಗಳು ನೈತಿಕತೆ, ಸಮಾನತೆ, ಸಹಜ ಜೀವನ ಮತ್ತು ಭಕ್ತಿಯ ಮಾರ್ಗವನ್ನು ಪ್ರತಿಪಾದಿಸುತ್ತವೆ. ಅವರು ಅಂಧಶ್ರದ್ಧೆ, ಮದ್ಯಪಾನ ಮತ್ತು ಅನೈತಿಕ ಚಟುವಟಿಕೆಗಳನ್ನು ತ್ಯಜಿಸುವಂತೆ ಜನರನ್ನು ಪ್ರೇರೇಪಿಸಿದರು. ಸಮುದಾಯದ ಏಕತೆ, ಶ್ರಮದ ಗೌರವ ಮತ್ತು ಪ್ರಕೃತಿಯೊಂದಿಗೆ ಸಮನ್ವಯದಲ್ಲಿ ಬದುಕುವ ಮಹತ್ವವನ್ನು ಅವರು ಬೋಧಿಸಿದರು. ಈ ಸಂಶೋಧನಾ ಲೇಖನವು ಶ್ರೀ ಸೇವಾಲಾಲರ ಉಪದೇಶಗಳ ತಾತ್ವಿಕ ಅರ್ಥ, ಸಾಮಾಜಿಕ ಪ್ರಾಸಂಗಿಕತೆ ಮತ್ತು ಇಂದಿನ ಸಮಾಜದಲ್ಲಿ ಅವುಗಳ ಪ್ರಾಮುಖ್ಯತೆಯನ್ನು ವಿಶ್ಲೇಷಿಸುತ್ತದೆ. ವಿಶೇಷವಾಗಿ, ಅವರ ಬೋಧನೆಗಳು ಸಾಮಾಜಿಕ ನ್ಯಾಯ, ಸಾಂಸ್ಕೃತಿಕ ಗುರುತು ಮತ್ತು ನೈತಿಕ ಮೌಲ್ಯಗಳ ಬೆಳವಣಿಗೆಯಲ್ಲಿ ಹೇಗೆ ಪಾತ್ರವಹಿಸುತ್ತವೆ ಎಂಬುದನ್ನು ಈ ಅಧ್ಯಯನವು ವಿವರಿಸುತ್ತದೆ.*

***Keywords:*** *ಶ್ರೀ ಸೇವಾಲಾಲ, ಉಪದೇಶಗಳು, ಲಂಬಾಣಿ ಸಮುದಾಯ, ಸಾಮಾಜಿಕ ಸುಧಾರಣೆ, ನೈತಿಕ ಮೌಲ್ಯಗಳು*

## ಪೀಠಿಕೆ

ಭಾರತದ ಭಕ್ತಿ ಪರಂಪರೆಯಲ್ಲಿ ವಿವಿಧ ಸಂತರು ಮತ್ತು ಸಮಾಜ ಸುಧಾರಕರು ತಮ್ಮ ಉಪದೇಶಗಳ ಮೂಲಕ ಸಮಾಜದ ಮೇಲೆ ಆಳವಾದ ಪ್ರಭಾವ ಬೀರಿದ್ದಾರೆ. ಅಂತಹ ಮಹಾನ್ ವ್ಯಕ್ತಿಗಳಲ್ಲಿ ಶ್ರೀ ಸೇವಾಲಾಲ ಮಹಾರಾಜರು ಪ್ರಮುಖ ಸ್ಥಾನವನ್ನು ಹೊಂದಿದ್ದಾರೆ. ಅವರು ಮುಖ್ಯವಾಗಿ ಲಂಬಾಣಿ ಅಥವಾ ಬಂಜಾರ ಸಮುದಾಯದ ಆಧ್ಯಾತ್ಮಿಕ ನಾಯಕನಾಗಿ ಗುರುತಿಸಲ್ಪಟ್ಟಿದ್ದು, ತಮ್ಮ ಜೀವನ ಮತ್ತು ಉಪದೇಶಗಳ ಮೂಲಕ ಸಮಾಜದಲ್ಲಿ ನೈತಿಕ ಜಾಗೃತಿ ಮೂಡಿಸಿದರು. ಶ್ರೀ ಸೇವಾಲಾಲರ ಉಪದೇಶಗಳು ಕೇವಲ ಧಾರ್ಮಿಕ ಚಿಂತನೆಗಳಿಗೆ ಸೀಮಿತವಾಗಿರದೆ, ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಒಳಗೊಂಡಿವೆ. ಅವರು ಸಮಾನತೆ, ಸತ್ಯನಿಷ್ಠೆ, ಪರಿಶ್ರಮ ಮತ್ತು ಸಹಜ ಜೀವನದ ಮಹತ್ವವನ್ನು ಒತ್ತಿಹೇಳಿದರು. ಸಮಾಜದಲ್ಲಿ ಇದ್ದ ಅನೇಕ ಅಂಧಶ್ರದ್ಧೆಗಳು ಮತ್ತು ಅನೈತಿಕ ಚಟುವಟಿಕೆಗಳನ್ನು ವಿರೋಧಿಸಿ, ಜನರನ್ನು ಸಜ್ಜನಿಕತೆ ಮತ್ತು ಸಾತ್ವಿಕ ಜೀವನದತ್ತ ಮುನ್ನಡೆಸಿದರು.

ವೇಗವಾಗಿ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ, ಶ್ರೀ ಸೇವಾಲಾಲರ ಉಪದೇಶಗಳು ಇನ್ನೂ ಪ್ರಸ್ತುತವಾಗಿವೆ. ವಿಶೇಷವಾಗಿ ಗ್ರಾಮೀಣ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಅವರ ಬೋಧನೆಗಳು ಸಾಮಾಜಿಕ ಏಕತೆ ಮತ್ತು ಸಾಂಸ್ಕೃತಿಕ ಗುರುತಿನ ಸಂರಕ್ಷಣೆಯಲ್ಲಿ ಮಹತ್ವದ

***Please cite this article as:*** ಜಾಧವ, ಎನ್.ಡಿ. (2026). ಮಹಾನ್ ಸಂತ ಶ್ರೀ ಸೇವಾಲಾಲರ ಉಪದೇಶಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 61–64

ಪಾತ್ರವಹಿಸುತ್ತವೆ. ಈ ಹಿನ್ನೆಲೆ, ಅವರ ಉಪದೇಶಗಳ ಅಧ್ಯಯನವು ಸಮಕಾಲೀನ ಸಮಾಜದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಸಹಕಾರಿ ಆಗುತ್ತದೆ.

ಸಮಾಜದಲ್ಲಿ ಘಟಿಸಿದ ಸತ್ಕಾರ್ಯಗಳ ದಾಖಲೆಗಳು ಸಮಾಜವನ್ನು ಉದ್ದರಿಸಿವೆ. ಪುಣ್ಯ ಪುರುಷರ ಚರಿತ್ರೆಗಳು ಮುಂದಿನ ಪೀಳಿಗೆಗೆ ದಾರಿ ದೀಪವೂ, ತೋರುಬೆರಳೂ ಹೌದು, ಸತ್ಯ, ಸೇವೆ, ತ್ಯಾಗ, ಪ್ರೇಮ, ಆದರ್ಶ ಮೊದಲಾದ ಪದಗಳ ನೈಜ ಅರ್ಥ ಕಣ್ಮರೆ ಆಗುತ್ತಿರುವ ಸಮಯದಲ್ಲಿ ಅವುಗಳಿಗೆ ಅರ್ಥ ತುಂಬಿ ಜನರ ಬಾಳು ಬೆಳಗಿಸಿದವರೆಲ್ಲರೂ ಮಹಾ ಮಾನವರೇ, ಒಂದರ್ಥದಲ್ಲಿ ಅವರನ್ನು ಸಮಾಜೋದ್ದಾರಕರೆಂದು ಕರೆಯಬಹುದು. ಈ ನಿಟ್ಟಿನಲ್ಲಿ ಸಮಾಜೋದ್ದಾರಕ್ಕಾಗಿ ಸಂತ ಸೇವಾಲಾಲರು ಬಂಜಾರ ಸಮುದಾಯವನ್ನು ಮೇಲೆತ್ತಲು ಪ್ರಯತ್ನಿಸಿದ ಮಹಾನ್ ಪುರುಷ.

ಈ ಪವಿತ್ರಾತ್ಮನೂ, ಸದಾಚಾರಿಯೂ ಆದ ಸೇವಾಲಾಲರು ಮಾಡಿದ ಕಾರ್ಯಗಳು, ಪವಾಡಗಳು, ಆಡಿದ ಮಾತಿನ ಪದಗಳೇ ಬಂಜಾರ ಜನಾಂಗದವರಿಗೆ ಆಧ್ಯಾತ್ಮಿಕ ಉಪದೇಶಗಳಾಗಿವೆ, ಅವುಗಳನ್ನು ಇಲ್ಲಿ ಚರ್ಚಿಸಲಾಗಿದೆ.

***ದೇಶ ಜಾವತೋಯಿ ಭೇಷ ಛೋಡೊಮತ: (ಪರದೇಶಕ್ಕೆ ಹೋದರು ತಮ್ಮ ವೇಷವನ್ನು ಮರೆಯಬೇಡಿರಿ)***

ಬಂಜಾರ ಸಮಾಜದ ಶ್ರೇಷ್ಠ ಸಂತ, ಕವಿಯಾದ ಶ್ರೀ ಸೇವಾಲಾಲರು ತನ್ನ ಕುಲಬಾಂಧವರಿಗೆ ಒಂದು ಕಿವಿಮಾತು ಹೇಳಿದ್ದಾರೆ. ಬಂಜಾರ ಬಂಧುಗಳೇ ನೀವು ದೇಶ ಬಿಟ್ಟು ಮತ್ತೊಂದು ದೇಶಕ್ಕೆ ಹೋದರು ಎಂದೆಂದಿಗೂ ತಮ್ಮ ಸಂಸ್ಕೃತಿಯ ಆಡು ನುಡಿ, ವೇಷ ಭೂಷಣವನ್ನು ಮರೆಯಬೇಡಿರಿ ಎಂದು ಹೇಳಿದ್ದಾರೆ.

***ಸತ್ಯ ರಜದ ಸಾಯಿ ಉಚು: (ಸತ್ಯ ಇದ್ದಲ್ಲಿ ಸಹಾಯಕನಾಗುವೆ)***

ಸತ್ಯ, ಧರ್ಮ, ಪವಿತ್ರತೆ, ನ್ಯಾಯ, ಎಲ್ಲಿ ಅಡಗಿರುವುದೋ ಅಲ್ಲಿ ತಾನು ಸದಾ ನೆಲೆಸಿರುತ್ತೇನೆ, ನಿತ್ಯ ಸತ್ಯದಿಂದ ನಡೆಯುವವನಿಗೆ ಎಂಥ ಕಷ್ಟಗಳು ಬಂದರೂ ಆ ಕಷ್ಟಗಳಲ್ಲಿ ತಾನು ಭಾಗಿಯಾಗಿ ಪಾರು ಮಾಡುವೆ ಎಂದು ಹೇಳಿದ್ದಾರೆ.

***ಮನ ಹರದೆ ಕರಜೇನ ಅನ್ನ ಧನ್ಸ್ ದಿಂಯು: (ನನ್ನನ್ನು ನೆನೆಯುವರನ್ನು ನಾನು ಸದಾ ಕಾಪಾಡುವೆ)***

ನನ್ನನ್ನು ಯಾರು ದಿನನಿತ್ಯ ಕಾಯಕದಲ್ಲಿ ನೆನೆಯವರೋ ಅವರ ಬದುಕಿನಲ್ಲಿ ಸಿರಿ ಸಂಪತ್ತುಗಳನ್ನು ನೀಡಿ ಅವರ ಕಷ್ಟ ಕಾರ್ಯಗಳಲ್ಲಿ ಭಾಗಿಯಾಗಿ ಅವರ ದುಃಖವನ್ನು ದೂರ ಮಾಡುವೆ ಎಂದು ನುಡಿದಿದ್ದಾರೆ.

***ಮಾರೆ ನಾಮೆರ ದೀವೋ ಲಗಜೇರ ಘರ, ಘೀಯೇರ ರೇಲ ಚಾಲಿಯು: (ಭಕ್ತಿಯಿಂದ ಮನೆಯಲ್ಲಿ ಯಾರು ಪೂಜಿಸುವರೋ ಅವರ ಮನೆಯಲ್ಲಿ ತುಪ್ಪದ ಕಾಲುವೆ ಹರಿಸುವೆ)***

ದೇವಿ ಜಗನ್ಮಾತೆಯ ಪರಮ ಭಕ್ತನಾಗಿ, ಸಾಕ್ಷಾತ್ ಪರಮಾತ್ಮನ ಅವತಾರ ತಾಳಿ, ಅನೇಕ ಪವಾಡಗಳನ್ನ ಮಾಡಿ ಬಂಜಾರ ಸಮಾಜದ ಜನರಿಗೆ ಒಳ್ಳೆಯ ಮಾರ್ಗ ತೋರಿಸಿದ ಮಹಾನ್ ಶಕ್ತಿ ಪುರುಷ ಇವರು. ತಾಂಡಾಗಳಲ್ಲಿ ಯಾರ ಮನೆಯಲ್ಲಿ ಭಕ್ತಿ ಭಾವದಿಂದ ನನ್ನನ್ನ ಪೂಜಿಸುವರೋ, ಅವರ ಮನೆಯಲ್ಲಿ ತುಪ್ಪದ ಕಾಲುವೆ ಹರಿಸುವೆ ಎಂದು ಹೇಳಿದ್ದಾರೆ.

***ಮಾರ ನಾಮೆರ ರಾಖಕೇತಿ ಅಟ್ಠಾರ ರೋಗ ಹಟ್ಟಿಯ: (ನನ್ನ ನಾಮದ ಬೂದಿ ಹಣೆಗೆ ಹಚ್ಚಿಕೊಂಡರೆ ಶರೀರದ ಹದಿನೆಂಟು ರೋಗ ಮಾಯವಾದಿತ್ತು)***

ಹಿಂದಿನ ಕಾಲದಲ್ಲಿ ಊರುಗಳಲ್ಲಿ 'ಕಾಲರ' ಬೇನೆಯಿಂದ ಸಾವಿರಾರು ಜನರು ಸಾಯುತ್ತಿದ್ದರು.

ಅಂತಹ ಕಾಲದಲ್ಲಿ ಬಂಜಾರ ಸಮಾಜದವರಿಗೆ ಗುರು ಸಂತ ಶ್ರೀ ಸೇವಾಲಾಲರು ತಮ್ಮ ಸಮಾಜಕ್ಕೆ ಆಶೀರ್ವಾದ ನೀಡುತ್ತಾರೆ. ಭಕ್ತಿಯಿಂದ ತನ್ನನ್ನು ನೆನೆದು ತಮ್ಮ ಹೆಸರಿನ (ಬೂದಿ) ಭಸ್ಮ ಹಣೆಗೆ ಹಚ್ಚಿಕೊಂಡರೆ ತಮ್ಮ ಶರೀರದಲ್ಲಿರುವ ಹದಿನೆಂಟು ರೋಗ ಮಾಯವಾಗುವುದು ಎಂದು ನುಡಿದಿದ್ದಾರೆ. ಬಂಜಾರ ಸಮಾಜದ ಜನರು ಇಂದಿಗೂ ಸೇವಾಲಾಲರ(ಭೋಗ) ಹೋಮ್ ಆಚರಣೆಯ ಬೂದಿಯನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ. ಇದರಿಂದ ತಮ್ಮ ದುಃಖ ದುಮ್ಮಾನಗಳು ದೂರಾಗುತ್ತದೆ ಎಂದು ಅವರಲ್ಲಿ ಗಾಢವಾದ ನಂಬಿಕೆ ಇದೆ.

*ಚಾರಿ ಖಂಡೆಮ ಕಾಳ ಆಯೆ ।*
*ಮಾಯೇನ ಬೇಟಾ ದೂರವಿಯ।*
*ರಪಿಯಾರ ಕಟೋರ ಪಾಣಿ ವಕೀಯ*
*ರಫಿಯಾರ ತೇರ ಚಣಾವಕಕೀಯ*
*ಸೇವಾ ಕೇಗೋಛರ ಬಣಜಾರೋ*
*ಸೇವಾ ಕೇಗೋಛರ*

ನಾಲ್ಕು ಖಂಡಗಳಲ್ಲಿ ಬರಗಾಲ ಕಾಲಿರಿಸಿತ್ತು. ತಾಯಿಗೆ ಮಗ ದೂರವಾದನು. ರೂಪಾಯಿಗೆ ಚಂಬು ನೀರು ಮಾರಾಟವಾದಿತ್ತು ಎಂದು ಬಂಜಾರರಿಗೆ ಸೇವಾಲಾಲ ಹೇಳಿ ಹೋಗಿದ್ದಾರೆ.

*ಏಕ ಘರ ಕಾನೀ ರೇದ*
*ಮಾರ ಲಗಿ ಝುಲಾವೂ*
*ಸಾತ ಪೀಡಿಮಾಯಿ ಅವತಾರ ಲಿಂವು*
*ಚೌದ ಪೀಡಿಮಾಯಿ ಗುತ್ತೀವಲ್ಲಾರಿಮ*
*ಘರನ ಜಲಮ ಲಿಂವು*

ಏಳನೆಯ ತಲೆಮಾರಿನಲ್ಲಿ ಅವತಾರವನ್ನ ತಾಳುತ್ತೇನೆ. ಹದಿನಾಲ್ಕನೇ ತಲೆಮಾರಿನಲ್ಲಿ ಗುತ್ತಿ ವಲ್ಲಾರಿಯ ಪೂರ್ವದ ಮನೆತನದಲ್ಲಿ ಮರುಜನ್ಮವನ್ನು ಪಡೆಯುವೆ ಎಂದು ತನ್ನ ಸಮಾಜದ ಬಂಧುಗಳಿಗೆ ದಿವ್ಯ ಸಂದೇಶವನ್ನು ನೀಡಿದ್ದಾರೆ. ಅದು ಇಂದು ನಿಜ ಎನಿಸಿದೆ. ಮಹಾರಾಷ್ಟ್ರದ ಅಕೋಲಾ ಜಿಲ್ಲೆಯ ಪೌರಾದೇವಿಯ ಸೇವಕ ದಿವಂಗತ ಶ್ರೀ ರಾಮರಾವ್ ಮಹಾರಾಜರು ಸಾತಪೀಡಿ (ಏಳನೇ ತಲೆಮಾರಿನ) ಅವತಾರಿ ಪುರುಷರಾಗಿದ್ದಾರೆ ಎಂದು ಬಂಜಾರ ಸಮಾಜದವರು ನಂಬಿಕೊಂಡಿದ್ದಾರೆ.

*ಉತ್ತರ ದಿಕ್ಕೇತಿ ಆಂಯೂ*
*ಧೋಳೊ ಘೋಡೊ ಲೇನ ಆಂಯೂ*
*ಧೋಳೊ ಝುಂಡಾ ಲಗಾಲೇನ ಆಂಯೂ*
*ಕೂಣಸೋ ಗೋರ ಮನ*
*ವಳಕಿಯ ಓನ ಮಾ*
*ಹಜಾರ ಹಾತೇತಿ ದೇಜಾಂಯೂ*

ಬಿಳಿ ಕುದುರೆಯ ಮೇಲೆ, ಬಿಳಿ ಬಾವುಟ ಹಾಕಿಕೊಂಡು, ಉತ್ತರ ದಿಕ್ಕಿನಿಂದ ಬರುವೆ. ಯಾರು ತನ್ನನ್ನು ಗುರುತಿಸಿರುವರೋ ಅವರ ಬದುಕಿನ ಕಷ್ಟ ದುಃಖ ದೂರ ಮಾಡಿ, ಸಿರಿ ಸಂಪತ್ತಿನಿಂದ ಮೆರೆಯಲಿ ಎಂದು ಆಶೀರ್ವದಿಸಿ ಹೋಗುವೆ ಎಂದು ತನ್ನ ಬಂಜಾರ ಸಮಾಜದವರಿಗೆ ಹೇಳಿ ಹೋಗಿದ್ದಾರೆ.

*ಸಣೋ ಬಣಜಾರ, ಚೊರಿ ಕರಿಯೋ ಕೋರಿ ಖಾಯೋ*
*ಪಾಡಿಯೋ ದಾರು ಭಟ್ಟಿ ಲಾಗಿಯ ತಮಾರಿ ತಟ್ಟಿ*
*ಘರೆ ಮುಂಡಾಗ ಕೂಕಡಿ ಮತ ಪಾಳೋ*
*ಧಾಸಣಿ ಮತ ಘಾಲೋ, ದಾಂಡನ ಮತ ಖಾಯೋ*
*ಚೌದ ಫೀಡಿಮಾಯಿ ಆಯಿತೋಯಿ ಖುಟೀನಿ ಜಸ*
*ಅನ್ನ ಧನ್ನೆರಿ ಗಟಡಿ ದೇವಾಳೋ ಛು*
*ಮರಗೋಚ ಕರನ ಭೂಲೋ ಮತ*
*ಕೆನ ಮನ ರೀಯ ವತ ಕನ ರಿಂವ*
*ಆತರಿ ಮಾರ ಆಶಿಸೆಮ ಚಾಲೋ*
*ಜಾಗೋ ಗೋರ ಬಂಜಾರ*

ಸೇವಾಲಾಲರ ದಿವ್ಯ ಜ್ಯೋತಿ ಆರಿದ ನಂತರ ತನ್ನ ಬಂಜಾರ ಸಮಾಜಕ್ಕೆ ದಿವ್ಯ ವಾಣಿಯಾಗಿ ಸಂದೇಶ ನೀಡಿದ್ದಾರೆ. ಕಳ್ಳತನ ಮಾಡದಿರಿ, ಸೆರೆ ಸಿಂಧಿಯಿಂದ ದೂರ ಇರಿ, ತಾನು ಹದಿನಾಲ್ಕನೆಯ

ತಲೆಮಾರಿಗೆ ಮತ್ತೆ ಹುಟ್ಟಿ ಬರುವೆ, ಬಂಜಾರ ಬಂಧುಗಳೇ ನೀವೇನು ಚಿಂತಿಸ ಬೇಡಿರಿ. ನಿಮ್ಮನ್ನು ಬಿಟ್ಟು ಹೋಗಿದೆನೆಂದು ತಿಳಿಯಬೇಡಿರಿ. ನೆನೆದವರ ಮನದಲ್ಲಿ ಯಾವತ್ತೂ ಇದ್ದು ಬಂಜಾರ ಸಮಾಜದ ಮೇಲೆ ಯಾವತ್ತೂ ತನ್ನ ಆಶೀರ್ವಾದ ಇರುತ್ತದೆ ಎಂದು ಹೇಳಿದ್ದಾರೆ.

ಸೇವಾಲಾಲರು ತಮ್ಮ ಬದುಕಿನುದ್ದಕ್ಕೂ ತಮ್ಮ ಜನಾಂಗದ ಜನರ ಏಳಿಗೆಯನ್ನು ಬಯಸುತಾ, ಸಮಾಜದಲ್ಲಿ ಶಾಂತಿಯನ್ನು ಕಾಪಾಡುತ್ತಾ, ಪ್ರತಿಯೊಬ್ಬ ಬಂಜಾರ ಭಕ್ತರಿಗೆ ಯಾವುದೇ ರೀತಿಯ ಕಷ್ಟಗಳು ಬರದಂತೆ ನೋಡಿದಂತಹ ಮಹಾನ್ ಪುರುಷರವರು. ಅಷ್ಟೇ ಅಲ್ಲದೆ ತಮ್ಮ ಜೀವನದುದ್ದಕ್ಕೂ ತಮ್ಮ ಜನಾಂಗದ ಜನರಿಗೆ ಹಲವಾರು ರೀತಿಯ ಉಪದೇಶಗಳನ್ನು ನೀಡಿದ್ದುಂಡು. ಜೀವನ ಸಾಗಿಸುತ್ತಿರುವ ಪ್ರದೇಶವನ್ನು ಬಿಟ್ಟು ಬೇರೆ ಯಾವುದೇ ಪ್ರದೇಶಕ್ಕೆ ಹೋದರೂ ಸಹ ನಮ್ಮ ಜನಾಂಗದ ಆಡು ಭಾಷೆ, ವೇಷ ಭೂಷಣವನ್ನು ಮರೆಯದಿರಿ ಎಂದು ಹೇಳುತ್ತಾ ಅಷ್ಟೇ ಅಲ್ಲದೆ ಕಳ್ಳತನ ಮಾಡಿ ಜೀವನ ಸಾಗಿಸದಿರಿ, ದುಡಿಮೆಯಿಂದ ಜೀವನವನ್ನು ಸಾರ್ಥಕ ಗೊಳಿಸಿ ಎಂದು ಹೇಳುತ್ತಾ ಸತ್ಯ, ಧರ್ಮ, ಪವಿತ್ರತೆ, ನ್ಯಾಯ, ಭಕ್ತಿ ಎಲ್ಲಿ ಅಡಗಿರುವುದೋ ಅಲ್ಲಿ ನಾನು ಸದಾ ಕಾಲ ನೆಲೆಸಿರುವೆನೆಂದು ತಿಳಿಸುತಾ ಉತ್ತಮ ನ್ಯಾಯಯುತವಾದ ಬದುಕನ್ನು ಸಾಗಿಸಲು ಬಂಜಾರ ಸಮಾಜದವನು ಪ್ರೇರೇಪಿಸಿ, ಆ ನಿಟ್ಟಿನಲ್ಲಿ ಯಶಸ್ವಿಯಾದ ಬಂಜಾರ ಸಮಾಜದ ಸಂತ. ಒಂದರ್ಥದಲ್ಲಿ ಆ ಸಮುದಾಯದ ಸಾಂಸ್ಕೃತಿಕ ನಾಯಕನೆಂದೆ ಗುರುತಿಸಿಕೊಂಡವರು ಇವರ ನಡೆ ನುಡಿಗಳೇ ಅನೇಕ ಸಂದರ್ಭಗಳಲ್ಲಿ ಪವಾಡಗಳಾಗಿ ಪರಿಣಮಿಸಿದ್ದುಂಟು.

**ಪರಾಮರ್ಶನ ಗ್ರಂಥಗಳು**


- ಹರಿಲಾಲ ಪವಾರ್. (1998). *ಸಂತ ಸೇವಾಲಾಲ.* ಶ್ರೀಜ.ತೋ.ಸಂ.ಡಂಬಾಳ
- ಜಾಧವ, ಎನ್.ಡಿ. (2007). *ಮೌಖಿಕ ಸಂಪ್ರದಾಯದಲ್ಲಿ ಸಂತ ಸೇವಾಲಾಲ.* ಸಂಶೋಧನಾ ಸಂಪ್ರಬಂಧ.
- ನಾಯ್ಕ ಮಲ್ಲಿಕಾರ್ಜುನ ಬಿ.ಎಚ್. (2002). *ಶ್ರೀ ಸೇವಾಲಾಲ ಚರಿತ್ರೆ.* ಯೋಗೇಶ್ವರ ಪ್ರಕಾಶನ.
- ಸಣ್ಣರಾಮ. (1999). *ಲಂಬಾಣಿ ಸಂಸ್ಕೃತಿ.* ಶಂಕರಘಟ್ಟ, ಶಿವಮೊಗ್ಗ.
- Burman, J. J. Roy. (2010). *Ethnography of a denotified tribe: The Laman Banjara*. Mittal Publications.
- Naik, Dhanasing B. (2000). *The art and literature of Banjara Lambanis: A socio-cultural study*. Abhinav Publications.
- Satyanarayana, D. (2021). *The journey and life of Sant Sri Sevalal Maharaj*. Self-published.
- Government of India. (2023). *Sant Sevalal Maharaj and his contributions to tribal society*. Publications Division.